# ತೊಂಡಲೆಯುವ ಚಾಪಲ್ಯ

ಮೂಲತಃ 'ತೊಂಡು' ಎಂಬ ಪದದ ಅರ್ಥ ಭಕ್ತಿ ಎಂದೇ. ದೇವರ ಹೆಸರಿನಲ್ಲಿ ಭಕ್ತಿಯಿಂದ ಮೀಸಲಾಗಿರಿಸುವ ಗೂಳಿ ಯಾರ ಅಂಕೆ–ಅಂಕುಶಗಳಿಲ್ಲದೆ, ಸಿಕ್ಕ ಸಿಕ್ಕ ಹೊಲಗದ್ದೆಗಳಿಗೆ ನುಗ್ಗಿ, ಪೈರನ್ನು ಧ್ವಂಸ ಮಾಡುತ್ತದೆಯಷ್ಟೆ? ಅಂಥ ಗೂಳಿಯನ್ನು 'ತೊಂಡು ದನ' ಎಂದು ಕರೆದರು. ಕ್ರಮೇಣ ಅದು 'ಪೋಲಿ ದನ' ಎಂದು ಅರ್ಥ ವ್ಯತ್ಯಾಸಕ್ಕೆ ಒಳಗಾಯಿತು. ಹೀಗಾಗಿ 'ತೊಂಡಲೆಯುವುದು' ಎಂದರೆ, ಬೀದಿ ಬಸವನಂತೆ ಯಾವ ನಿಯಂತ್ರಣಕ್ಕೂ ಒಳಗಾಗದೆ ಸ್ವೇಚ್ಛೆಯಾಗಿ ಅಲೆಯುತ್ತಿರುವುದು ಎಂಬರ್ಥವೇ ರೂಢಿಯಲ್ಲಿದೆ.

ಅಲೆಯುವ ಪ್ರವೃತ್ತಿ ಚಲನಶಕ್ತಿಯುಳ್ಳ ಎಲ್ಲ ಜೀವಿಗಳಲ್ಲೂ ಅಂತರ್ಗತವಾಗಿ ಇರುತ್ತದೆ. ಅಗತ್ಯವಿದ್ದಾಗ, ಅನಿವಾರ್ಯವೆನ್ನಿಸಿದಾಗ, ಪ್ರಾಣಿ ಪಕ್ಷಿಗಳು ಇಂಥ ಮನೋಧರ್ಮವನ್ನು ಪ್ರದರ್ಶಿಸುತ್ತವೆ. ಆಹಾರ, ಆಶ್ರಯ, ಅನುಕೂಲವೆನ್ನಿಸುವ ಹವಾಮಾನ, ಸೂಕ್ತ ಪರಿಸರ, ಪ್ರಾಣ ರಕ್ಷಣೆ–ಮುಂತಾದವುಗಳ ಕಾರಣದಿಂದ ಕಾಲದಿಂದ ಕಾಲಕ್ಕೆ ವಾಸ್ತವ್ಯವನ್ನು ಬದಲಾಯಿಸುವ ಪ್ರಾಣಿ ಪಕ್ಷಿಗಳೂ, ಇನ್ನಿತರ ಜೀವಿಗಳೂ ಸಾಕಷ್ಟಿವೆ. ನಿರ್ದಿಷ್ಟ ಕಾರಣ, ಉದ್ದೇಶಗಳಿರುವ ಇಂಥ ಚಲನೆಯನ್ನು 'ತೊಂಡಲೆಯುವಿಕೆ' ಎನ್ನುವಂತಿಲ್ಲ. ಮನುಷ್ಯನೂ ಆಹಾರ, ನೀರು, ಆಶ್ರಯ, ಸುರಕ್ಷಿತತೆ ಮುಂತಾದ ಕಾರಣಗಳಿಗಾಗಿ ಅಲೆದಾಡುತ್ತಾನೆ, ನಿಜ. ಆದರೆ, ಏನೆಲ್ಲ ಲೌಕಿಕ ಅನುಕೂಲತೆಗಳಿದ್ದಾಗ್ಯೂ– ಇರುವುದೆಲ್ಲವನ್ನೂ ಬಿಟ್ಟು– ವಿನಾಕಾರಣ ಅಲೆಮಾರಿಗಳಾಗಿ ಬದುಕುವವರೂ ಇದ್ದಾರೆ. ಅಂಥವರಲ್ಲಿ ತೊಂಡಲೆಯುವ ಚಾಪಲ್ಯ ಗರಿಷ್ಠ ಪ್ರಮಾಣದಲ್ಲಿರುತ್ತದೆ. ಜೋಗಿಗಳು, ಸಂನ್ಯಾಸಿಗಳು, ಫಕೀರರು, ಜಂಗಮರು– ಇಂಥ ವರ್ಗಕ್ಕೆ ಸೇರಿದವರು. ಅಂಥವರಿಗೆ ಯಾವುದೇ 'ಭವ ಬಂಧನ' ವಿರುವುದಿಲ್ಲ. 'ಎಲ್ಲಿಯೂ ನಿಲ್ಲದಿರು, ಮನೆಯನೆಂದೂ ಕಟ್ಟದಿರು' ಅಂಬ 'ಅನಿಕೇತನ ಪ್ರಜ್ಞೆ' ಸಹಜ ವಿರಕ್ತರ ತೊಂಡುತನಕ್ಕೆ ಕಾರಣವಾಗುತ್ತದೆ. ಅಂಥ ಪರಿವ್ರಾಜಕರಿಗೆ ಲೌಕಿಕ ಬದುಕಿನ ನಾಳೆಗಳ ಚಿಂತೆ ಕಾಡುವುದಿಲ್ಲ. ಅಂಥವರ ತೊಂಡುತನದ ಹಿನ್ನೆಲೆಯಲ್ಲಿ ಬದುಕನ್ನು ಕುರಿತಾದ ಪಲಾಯನ ಪ್ರವೃತ್ತಿಯಾಗಲೀ, ದುಡಿದುಣ್ಣುವ ಕಷ್ಟದಿಂದ ತಪ್ಪಿಸಿಕೊಳ್ಳಬೇಕೆಂಬ ಮೈಗಳ್ಳತನವಾಗಲೀ ಇರುವುದಿಲ್ಲ. ತಾವು ನಂಬಿದ ಯಾವುದೋ ಒಂದು ಹಿರಿಯ ತತ್ತ್ವಕ್ಕೆ ತಮ್ಮನ್ನು ಸಂಪೂರ್ಣವಾಗಿ ಒಪ್ಪಿಸಿಕೊಂಡು, ಸಾಧ್ಯವಾದಷ್ಟೂ ಲೋಕಹಿತವನ್ನು ಸಾಧಿಸಬೇಕೆನ್ನುವ ಸಾತ್ವಿಕ ನಿಷ್ಠೆ ಇರುತ್ತದೆ. ಆದ್ದರಿಂದಲೇ ಇಂಥ ವಿರಕ್ತಜೀವಿಗಳನ್ನು ಭಾರತೀಯರು ಗೌರವಿಸುತ್ತಾ ಬಂದಿರುವುದು.

ಆದರೆ ವೈರಾಗ್ಯದ ಮುಖವಾಡ ಧರಿಸಿ, ಕೆಲಸ ಗಳ್ಳರಾಗಿ, ತೊಂಡಲೆಯುತ್ತಾ ಬದುಕುವ ಜನಗಳೂ ನಮ್ಮ ಸುತ್ತಮುತ್ತ ಕಾಣಿಸಿಕೊಳ್ಳುತ್ತಲೇ ಇರುತ್ತಾರೆ. ಇಂಥ ಆಷಾಢಭೂತಿಗಳು ಬದುಕಿನ ಸಹಜ ಲಯವನ್ನು ಸ್ವೀಕರಿಸದೆ ತಮ್ಮನ್ನು ತಾವು ವಂಚಿಸಿಕೊಂಡು, ಸಮುದಾಯದ ಸ್ವಾಸ್ಥ್ಯವನ್ನು ಕೆಡಿಸುತ್ತಾರೆ. ಕೆಲವು ಕಡೆ ತೊಂಡು ದನಗಳನ್ನು ನಿಯಂತ್ರಿಸಲು ಅವುಗಳ ಕೊರಳಿಗೆ ಒಂದು ಬಡಿಗೆಯನ್ನು ಕಟ್ಟುವ ಪದ್ಧತಿ ಇದೆ. ಅದೇ ರೀತಿ ತೊಂಡಲೆಯುವ ಯುವಕರನ್ನು ಹತೋಟಿಯಲ್ಲಿಡಲು, ಅವರಿಗೊಂದು ಮದುವೆ ಮಾಡಿ, ಸಂಸಾರ ಭಾರವನ್ನು ಹೊರಿಸುವ ಉಪಾಯವೇನೋ ಇದೆ. ಆದರೆ ಅಂಥ ಜವಾಬ್ದಾರಿಯನ್ನೂ ನಿರ್ಲಕ್ಷಿಸಿ, ಊರುಬಿಟ್ಟು, ಪಲಾಯನ ಮಾಡುವವರೂ ಅಪರೂಪವೇನಲ್ಲ.

ಮನುಷ್ಯನ ಮನಸ್ಸಿನ ಚಾಂಚಲ್ಯವೇ ಇಂಥ ತೊಂಡುತನಕ್ಕೆ ಮುಖ್ಯ ಕಾರಣವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಸಾಮಾನ್ಯರ ಮನಸ್ಸು ಕಷ್ಟ ಸಂಕಟಗಳನ್ನು ಎದುರಿಸಲು ತಯಾರಾಗಿರುವುದಿಲ್ಲ; ಜವಾಬ್ದಾರಿಯನ್ನು ಹೊರಲು ನಿರಾಕರಿಸುತ್ತದೆ; ವಸ್ತುಸ್ಥಿತಿಯನ್ನು ಸ್ವೀಕರಿಸದೇ, ಪಲಾಯನ ಪ್ರವೃತ್ತಿಯನ್ನು ಆಶ್ರಯಿಸುತ್ತದೆ; ಹಗುರ ಜೀವನದತ್ತ ವಾಲುತ್ತದೆ. ಒಂದು ನಿರ್ದಿಷ್ಟ ಗುರಿಯತ್ತ ಮನಸ್ಸನ್ನು ಕೇಂದ್ರೀಕರಿಸುವುದು ಎಲ್ಲರ ಪಾಲಿಗೂ ಸಾಧ್ಯವಿಲ್ಲ. 'ಚಂಚಲಂ ಹಿ ಮನಃ ಕೃಷ್ಣ...' ಎಂದು ಭಗವಾನ್ ಕೃಷ್ಣನನ್ನು ಕೇಳುವ ಅರ್ಜುನ ನಮ್ಮೆಲ್ಲರ ಕಷ್ಟವನ್ನೇ ಅಭಿವ್ಯಕ್ತಿಸಿದ್ದಾನೆ. ಮನಸ್ಸನ್ನು ನಿಗ್ರಹಿಸುವುದೆಂದರೆ, ಗಾಳಿಯನ್ನು ಕಟ್ಟಿಹಾಕುವಷ್ಟು ಕಷ್ಟಕರವಾದುದು ಎನ್ನುತ್ತಾನೆ ಅರ್ಜುನ. ಈ ಸಮಸ್ಯೆಗೆ ಕೃಷ್ಣನು ಸೂಚಿಸುವ ಪರಿಹಾರಗಳೆಂದರೆ ಅಭ್ಯಾಸ ಮತ್ತು ವೈರಾಗ್ಯ. ಇವುಗಳಲ್ಲಿ ವೈರಾಗ್ಯವೆಂಬುದು ಕೆಲವೇ ಕೆಲವರಿಗೆ ಪ್ರಾಪ್ತವಾಗುವಂಥದು. ಆದರೆ ಅಭ್ಯಾಸವೆಂಬುದು ಹಾಗಲ್ಲ. ಸಾಧಿಸಬೇಕಾಗಿದ್ದುದನ್ನು ಎಟುಕಿಸಿಕೊಳ್ಳುವ ಸಲುವಾಗಿ ಮತ್ತೆ ಮತ್ತೆ ಪ್ರಯತ್ನ ಮಾಡುವ ಪ್ರಕ್ರಿಯೆಯನ್ನೇ ಅಭ್ಯಾಸವೆನ್ನಬಹುದು. ಸತತ ಪ್ರಯತ್ನದಿಂದ ಮನಸ್ಸನ್ನು ದೃಢಗೊಳಿಸಿ, ಚಾಂಚಲ್ಯವನ್ನು ನಿಯಂತ್ರಿಸಬಹುದು. ತೊಂಡಲೆಯುವ ಚಾಪಲ್ಯಕ್ಕೆ ಇಂಥ ಪ್ರಜ್ಞಾಪೂರ್ವಕ 'ಅಭ್ಯಾಸ' ಕಡಿವಾಣವಾದೀತು.

■ ವೈನತೇಯ

## ಮಾತೇ ಮುತ್ತು

★ ನೀನು ನಿನ್ನ ಸ್ನೇಹಿತನಾಗಿರು. ಇತರರೂ ನಿನ್ನ ಸ್ನೇಹಿತರಾಗುತ್ತಾರೆ.

–ಜರ್ಮನ್ ಗಾದೆ

★ ಸ್ನೇಹಿತರನ್ನು ತುಂಬಾ ಹಚ್ಚಿಕೊಳ್ಳುವುದರಿಂದಲೂ, ಸ್ವಲ್ಪವೂ ಹಚ್ಚಿಕೊಳ್ಳದೆ ಇರುವುದರಿಂದಲೂ ಅವರನ್ನು ಕಳೆದುಕೊಳ್ಳುತ್ತೇವೆ.

–ಸ್ಕಾಟಿಷ್ ಗಾದೆ

★ ಜೀವನ ಸೋಲು ಗೆಲುವುಗಳ ಕಲಸುಮೇಲೋಗರ. ಗೆಲುವು ಉತ್ಸಾಹ ತಂದರೆ ಸೋಲು ಶಕ್ತಿ ತರುತ್ತದೆ.

–ಗಾದೆ

★ ದೊಡ್ಡ ಗುರಿ ಇಟ್ಟುಕೊಂಡು ಸೋಲುವುದು, ಅಲ್ಪಗುರಿ ಇಟ್ಟುಕೊಂಡು ಗೆಲ್ಲುವುದಕ್ಕಿಂತ ಲೇಸು.

–ರಾಬರ್ಟ್ ಬ್ರೌನಿಂಗ್

★ ಸಂಭಾಷಣೆಯ ಎರಡು ಮುಖ್ಯ ಗುರಿ; ನಾವು ಯಾರೊಡನೆ ಇರುವೆವೋ ಅವರಿಗೆ ಸಂತೋಷ ಉಂಟುಮಾಡುವುದು, ಸಾಧ್ಯವಾದರೆ ಅವರನ್ನು ಉತ್ತಮ ಪಡಿಸುವುದು ಹಾಗೂ ನಾವು ಉತ್ತಮರಾಗುವುದು.

–ಜೊನಾಥನ್ ಸ್ವಿಫ್ಟ್

★ ಕೆಲಸದ ಆರಂಭದಲ್ಲಿ ತೋರುವ ಎಚ್ಚರ, ಶ್ರದ್ಧೆಗಳನ್ನು ಕೊನೆಯಲ್ಲೂ ತೋರಿದರೆ ಎಂದೂ ಸೋಲು ಇರದು.

–ಲೋಟ್ಸು

★ ಅನೇಕರು ಗೆದ್ದಾಗ ಸೋಲುತ್ತಾರೆ; ಕೆಲವರು ಸೋತಾಗ ಗೆಲ್ಲುತ್ತಾರೆ.

–ಜರ್ಮನಿ ಗಾದೆ

★ ಮೀರಾ ಹಾಡಿದುದು ಏಕೆಂದರೆ, ಹಾಡದೆ ಇರುವುದು ಅವಳಿಗೆ ಸಾಧ್ಯವಾಗದ್ದರಿಂದಲೇ.

–ಮಹಾತ್ಮ ಗಾಂಧೀಜಿ

★ ಸಂಗೀತದ ಸ್ವಾರಸ್ಯ ಬೇಕಾದರೆ ಕಣ್ಣುಮುಚ್ಚಿ ಕಿವಿ ತೆರೆದಿರಬೇಕು; ಸಂಗೀತ ಸಭೆಯ ಸ್ವಾರಸ್ಯ ಬೇಕಾದರೆ ಕಿವಿಮುಚ್ಚಿ ಕಣ್ಣು ತೆರೆದಿರಬೇಕು.

–ಎಂ.ವಿ.ಸೀತಾರಾಮಯ್ಯ

★ ಸಂಸ್ಕೃತಿಯೆಂದರೆ ಮನುಷ್ಯರ ಅನ್ಯೋನ್ಯ ಸಂಬಂಧಗಳಲ್ಲಿ ನಯವಿನಯಗಳ ಸೊಬಗು. ಸ್ವಗುಣ, ಪರಗುಣಗಳ ಸಂಮಿಶ್ರಿತ ಕಾಂತಿ.

–ಡಿ.ವಿ.ಗುಂಡಪ್ಪ

★ ಕೇಳಿಸಿದ ಸಂಗೀತ ಮಧುರವಾದದ್ದು; ಆದರೆ ಕೇಳಿಸದ ಸಂಗೀತ ಅದಕ್ಕಿಂತ ಮಧುರವಾದದ್ದು.

–ಜಾನ್ ಕೀಟ್ಸ್

★ ಮೊದಲೇ ತಿಳಿವಿಗೆ ಬರದೆ ಬಂದ ಸಂತೋಷವೆಂದರೆ ಅರ್ಧ ನಷ್ಟವಾದ ಸಂತೋಷವೆಂದೇ. ಅದಕ್ಕಾಗಿ ನೋಡುವುದೆಂದರೆ ಅದನ್ನು ದ್ವಿಗುಣಗೊಳಿಸಿದಂತೆಯೇ.

–ಥಾಮಸ್ ಹಾರ್ಡಿ

★ ಬಲಹೀನನು ಸಂಪತ್ತನ್ನು ಸೃಷ್ಟಿಸುತ್ತಾನೆ. ಬಲವಂತನು ಸಂಪತ್ತನ್ನು ನುಂಗಿ ದಾರಿದ್ರ್ಯವನ್ನು ಹಂಚುತ್ತಾನೆ.

–ನಗ್ನಮುನಿ

★ ಸಮಸ್ಯೆ ಬಂದಾಗ ಗಾಬರಿಯಾಗದೆ, ಸೂಕ್ತ ಸಲಹೆ ಪಡೆದರೆ ಸಮಸ್ಯೆಗಳ ನಿವಾರಣೆ ಸಾಧ್ಯ.

–ವೀರೇಂದ್ರ ಹೆಗ್ಗಡೆ

★ ಅಹಂಕಾರ ಕ್ಷಯಿಸಿದಂತೆ ನಮ್ಮೊಳಗೆ ಅಸಮಾಧಾನ ಕ್ಷಯಿಸುತ್ತದೆ. ಲೋಕಕ್ಕೆ ನಮ್ಮಿಂದಾಗುವ ಬಾರ ಕಡಿಮೆಯಾಗುತ್ತದೆ. ಜೀವನ ಭಾರವನ್ನು ಹಗುರ ಮಾಡುವ ಯೋಗವೇ ಸಂಸ್ಕೃತಿ.

–ಎಮರ್‌ಸನ್